# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 104/2022

ಪಿಡಬ್ಲ್ಯೂ: 06
ಸಿಡಬ್ಲ್ಯೂ: 04

<u>ದಿನಾಂಕ: **18-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

ಸಾಕ್ಷಿದಾರರ ಹೆಸರು : ರಂಗಸ್ವಾಮಿ
ತಂದೆಯ ಹೆಸರು : ಹನುಮಂತಪ್ಪ
ವಯಸ್ಸು : 31 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಗುಡಿಹಳ್ಳಿ

<u>**ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರವರಿಂದ:**</u>

ಪ್ರಾಸಾ–**1** ನನಗೆ ಗೊತ್ತು. ಪ್ರಾಸಾ–**2** ಆತನ ತಂದೆ. ಪ್ರಾಸಾ–**4** ರವರ ಬಗ್ಗೆ ಕೂಡಾ ಗೊತ್ತಿದೆ. ಆತ ಟ್ರಾಕ್ಟರ್ ಚಾಲಕ. ನನಗೆ ಆರೋಪಿತರ ಗುರುತು ಇದೆ. **2** ಮತ್ತು **3** ನೇ ಆರೋಪಿತರ **1** ನೇ ಆರೋಪಿತನ ಮಕ್ಕಳು. **4** ನೇ ಆರೋಪಿ **1** ನೇ ಆರೋಪಿತನ ಅಣ್ಣನ ಮಗ. ಪ್ರಾಸಾ–**1** ರವರಿಗೆ ಗುಡಿಹಳ್ಳಿ ಹದ್ದಿಯಲ್ಲಿ ಜಮೀನು ಇದೆ. ದಿನಾಂಕ **23–08–2019** ರಂದು ಮುಂಜಾನೆ **10.30** ಗಂಟೆ ಸುಮಾರಿಗೆ ಪ್ರಾಸಾ–**1** ರವರ ಜಮೀನಿನ ಹತ್ತಿರ ಗಲಾಟೆಯಾಗುತ್ತಿತ್ತು. ನಾನು ಆ ಸ್ಥಳದಿಂದ ಸುಮಾರು **200** ಮೀ ದೂರದಲ್ಲಿರುವಂತಹ ನಮ್ಮ ಹೋಲದಲ್ಲಿ ಇದ್ದೆ. ಆ ಗಲಾಟೆಯ ಶಬ್ದ ಕೇಳಿ ನಾನು ಅವರ ಜಮೀನಿಗೆ ಹೋದೆ. ಆಗ ಆ ಸ್ಥಳದಲ್ಲಿ ಆರೋಪಿತರು ಹಾಗೂ ಪ್ರಾಸಾ–**1, 2** ಮತ್ತು **4** ರವರು ಅಲ್ಲಿ ಇದ್ದರು. ಆ ಘಟನೆಯಲ್ಲಿ **1** ನೇ ಆರೋಪಿ ಕಲ್ಲನ್ನು ತೆಗೆದುಕೊಂಡು ಪ್ರಾಸಾ–**1** ರವರಿಗೆ ಬಲಗಡೆಯ ಹಣೆಯ ಭಾಗಕ್ಕೆ ಹೊಡೆದ. ಅಲ್ಲದೇ ಅವರುಗಳು ಗಲಾಟೆ ಮಾಡಿಕೊಂಡು ಕೈಕಾಲುಗಳಿಂದ ಹೊಡೆದಾಡಿಕೊಂಡರು. ಸದರಿ ಘಟನೆಯಲ್ಲಿ ಆರೋಪಿತರು ಪ್ರಾಸಾ–**1** ಮತ್ತು **2** ರವರಿಗೆ ಕೈಕಾಲುಗಳಿಂದ ಹೋಡೆದರು. ನಾನು ಆ ಗಲಾಟೆಯನ್ನು ಬಿಡಿಸಿದ. ಆಗ ಪ್ರಾಸಾ–**1** ರವರ ಹಣೆ ಹಾಗೂ ಮೂಗು ಇವುಗಳಿಂದ ರಕ್ತಸ್ರಾವವಾಗುತ್ತಿತ್ತು. ಆತನ ಬಟ್ಟೆಗಳು ಸ್ವಲ್ಪ ಹರಿದಿದ್ದವು ಮತ್ತು ಆತ ಕೆಳಗೆ ಬಿದ್ದಿದ್ದರಿಂದ ಅವುಗಳಿಗೆ ಮಣ್ಣು ತಗಲಿತ್ತು. ಗಲಾಟೆಯಾದ ಸ್ಥಳದಲ್ಲಿ ಒಂದು ಗುಂಡಿ ಇದೆ. ಆ ಸ್ಥಳದಲ್ಲಿ ಕಲ್ಲು ಮತ್ತು ಮಣ್ಣು ಇದ್ದವು. ಈಗ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು **1** ನ್ನು ಗುರುತಿಸುತ್ತೇನೆ.

**2.** ಪೊಲೀಸರು ಅದೇ ದಿನ ಮದ್ಯಾಹ್ನ **3.00 – 4.00** ಗಂಟೆ ಸುಮಾರಿಗೆ ನನ್ನನ್ನು ಕರೆಸಿದ್ದರು ಮತ್ತು ಆ ಕಾಲಕ್ಕೆ ಮಹಜರ್ ಮಾಡಿ ಮುದ್ದೆ ಮಾಲು **1** ಕಲ್ಲನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು. ಆಗ ನನ್ನ ಜೊತೆ ಪ್ರಾಸಾ–**3** (ಚಂದ್ರುಶೇಖರ್) ಹಾಗೂ ಪ್ರಾಸಾ–**1** ರವರು ಇದ್ದರು. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**2** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**2**(ಸಿ) ಎಂದು ಗುರುತಿಸಲಾಯಿತು. ಆಗ ಅದಕ್ಕೆ

ಪ್ರಾಸಾ–**1** ಹಾಗೂ **3** ಅವರೂ ಕೂಡಾ ಸಹಿ ಮಾಡಿದ್ದಾರೆ. ಆರೋಪಿತರು ಕೈಕಾಲುಗಳಿಂದ ಪ್ರಾಸಾ–**1** ರವರಿಗೆ ಹಲ್ಲೆ ಮಾಡಿದ್ದರಿಂದ ಆತ ಗುಂಡಿಯಲ್ಲಿ ಬಿದ್ದ. ಘಟನೆಯ ನಂತರ ಪ್ರಾಸಾ–**1** ಆಸ್ಪತ್ರೆಗೆ ಹೋದ. ಜಮೀನಿನ ವಿಚಾರವಾಗಿ ಆ ಗಲಾಟೆಯಾಗಿದೆ. ಅಲ್ಲದೇ ಆರೋಪಿತರು ಬೋಳಿಮಗನೆ ಈ ಜಮೀನು ನಮ್ಮದು ಎಂದು ಪ್ರಾಸಾ–**1** ರವರಿಗೆ ಹೇಳಿದರು. ಘಟನೆ ಬಗ್ಗೆ ಪೊಲೀಸರಿಗೆ ಹೇಳಿದ್ದೇನೆ.

**ಪಾಟೀ ಸವಾಲು: ಶ್ರೀ ಬಿ.ಟಿ.ವಿ.ಎಸ್. ಆರೋಪಿತರ ಪರ ವಕೀಲರಿಂದಃ**

**3.** ನನಗೆ ಬಳಗಟ್ಟದಲ್ಲಿ ಮನೆ ಇದೆ ಎನ್ನುವುದು ನಿಜ. ಪ್ರಾಸಾ–**1** ರವರ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನು ಇದ್ದು ನಮ್ಮ ಜಮೀನಿನಲ್ಲಿ ಕೂಡಾ ನಮಗೆ ಸೇರಿದ ಒಂದು ಗುಡಿಸಲು ಇದೆ ಎನ್ನುವುದು ನಿಜ. ನಾವು ಅಕ್ಕಪಕ್ಕದ ಜಮೀನಿನವರಾದ ಕಾರಣ ನಾನು ಮತ್ತು ಪ್ರಾಸಾ–**1** ಒಳ್ಳೆಯ ಸ್ನೇಹಿತರು ಎಂದರೆ ಒಂದೆ ಊರಿನವರು ಮತ್ತು ಆತ ನಮ್ಮ ಬಳಗಟ್ಟದ ಹುಡುಗಿಯನ್ನು ಮದುವೆಯಾಗಿದ್ದಾನೆ. ಆತನ ಹೆಂಡತಿ ನನ್ನ ಸಂಬಂಧಿ ಎನ್ನುವುದು ಸರಿಯಲ್ಲ. ನಾನು ಆ ದಿನ ಜಮೀನಿನಲ್ಲಿ ಇರಲಿಲ್ಲ ಬಳಗಟ್ಟದಲ್ಲಿ ಇದ್ದೆ ಎನ್ನುವುದು ಸರಿಯಲ್ಲ. ನಾನು ಆ ದಿನ ಪ್ರಾಸಾ–**4** ರವರನ್ನು ನೋಡಿಲ್ಲ ಎನ್ನುವುದು ಸರಿಯಲ್ಲ. ನಾನು ಆ ದಿನ ಆ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಘಟನೆ ಆಗಿಲ್ಲ ಮತ್ತು ಪ್ರಾಸಾ–**1** ಇವರಿಗೆ ಗಾಯವೂ ಆಗಿಲ್ಲ ಎನ್ನುವುದು ಸರಿಯಲ್ಲ. ಪ್ರಾಸಾ–**1** ಆಸ್ಪತ್ರೆಗೆ ಹೋಗುವುದನ್ನು ನಾನು ನೋಡಿಲ್ಲ ಎನ್ನುವುದು ಸರಿಯಲ್ಲ. ಆತ ನನ್ನ ಸ್ನೇಹಿತನಾದ ಕಾರಣ ಆತ ಕೋರಿಕೊಂಡಂತೆ ಐಮಂಗಲ ಪೊಲೀಸ್ ಠಾಣೆಯಲ್ಲಿ ನಿಪಿ–**2** ಕ್ಕೆ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆತನ ಸಂಬಂಧಿಯಾಗಿದ್ದಾಗ್ಯೂ ಮತ್ತು ಘಟನೆಯನ್ನು ನೋಡದೇ ಇದ್ದಾಗ್ಯೂ ನಾನು ಸಂಬಂಧಿಯಲ್ಲವೆಂದು ಆದರೆ ಘಟನೆಯನ್ನು ನೋಡಿದ್ದೇನೆ ಎಂದು ಸುಳ್ಳು ಹೇಳುವಂತೆ ಪ್ರಾಸಾ–**1** ನನಗೆ ಹೇಳಿಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ.

**4.** **2** ನೇ ಆರೋಪಿ ತಲೆಗೆ ಪೆಟ್ಟು ಮಾಡಿಕೊಂಡು ಬಿದ್ದಾಗ ತನ್ನ ಮೇಲೆ ಕೇಸು ಬರುತ್ತದೆ ಎಂದು ಸದರಿ ಆರೋಪಿ ನನ್ನ ಮೂಲಕ ಸುಳ್ಳು ಸಾಕ್ಷ್ಯವನ್ನು ಹೇಳಿಸುತ್ತಿದ್ದಾನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

IN THE COURT OF PRL. SESSIONS JUDGE,
CHITRADURGA.

SC 104/2022

| | | |
|---|---|---|
| Deposition of | Dr. Niranjan | P.W.05 |
| Father's Name | Harish B.R. | C.W.06 |
| Age | 49 years | Duly sworn on: 18-01-2025 |
| Occupation | Orthopedic Surgeon, Hiriyuru | |
| Residence | Hiriyur | |

**Chief Examination by Spl. Public Prosecutor:-**

I am working in the Hiriyur Hospital as an Orthopediac for the last 15 years. On On 23-08-2019 at 12.05 noon injured by name Mahanthesh S/o Erappa, R/o Gudihalli, age 30 years came to our Hospital with history of assault on the same day at 10.30 a.m. On examining him I noticed following injuries;

1. Aberation present over right forehead 2x2 cm
2. Bleeding present from the left nostril
3. Lacerated wound over inner side of lower lip 2x2 cm.

In my opinion the said injuries are simple in nature. Having examined him I have issued wound certificate, now I see the same and it is marked as Ex.P.4.

2. If a person is bet with object like MO No.1, he may suffer injuries as noted at Sl.No.1 and 2. If a person falls to the ground on receiving assault, he may suffer injury like injury No.3. I have issued MLC intimation in this case.

**Cross Examination by Sri BTVS Advocate for accused:-**

3. It is true that if a person falls to a ground because of twisting of his leg, he may suffer injury No.1. It is further true

that while so falling, if he falls forcefully on a stone, he may suffer an injury like injury No.2. It is also true that a person may suffer injury to inside the lower lip if his tooth forcefully touches the lip. If a person requests for medical certificate having suffered such injuries, we will issue such certificate.

**Re-Exam: by Spl. Public Prosecutor:**

4. No doubt we issue wound certificates for having suffered injuries, if the injuries are suffered, certificate will not be issued to such injured. In case of a person falls to a ground because of twisting of his leg, in addition to suffering of head injury, he may also suffer other bodily injuries.

**Further cross Examination by Sri BTVS Advocate for accused:-**

5. It is true that a person would suffer injury to that part of the body, which contacts the ground immediately after falling. It is also true that if a person comes and tells us a falsehood that he has suffered injures due to assault, we will be recording the same as it is.

(Typed to my dictation in the open court)

R.O.I. & A.C.

Prl. District & Sessions Judge,
Chitradurga.